# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
# ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
## ವಾರ್ಡ್‌ಸಮಿತಿ ಸಭೆ, ದಿನಾಂಕ: 24.02.2021 ರ
## ಸಭಾ ನಡುವಳಿ

ದಿನಾಂಕ: 24.02.2021 ರಂದು ಬೆಳ್ಳಿಗೆ 11.00 ಗಂಟೆಗೆ ವಾರ್ಡ್ ನಂ.06 ಥಣಿಸಂದ್ರ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಬಿಬಿಎಂಪಿ ಸಮುದಾಯ ಭವನ, ಹೆಗಡೆನಗರ, 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ ಇಲ್ಲಿ ನೆಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ.ಎಸ್ ಶ್ರೀಧರ್ | ನೋಡಲ್ ಅಧಿಕಾರಿ, ವಾರ್ಡ್ ನಂ. 06(ಥಣಿಸಂದ್ರ) ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ಉಪ ವಿಭಾಗ |
| 2 | ಶ್ರೀ ಸುರೇಶ್ ದೇವತ್‌ರಾಜ್ | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ, ವಾರ್ಡ್ ಸಮಿತಿ, ವಾರ್ಡ್ ನಂ. 06 (ಥಣಿಸಂದ್ರ) |
| 3 | ಶ್ರೀ ಕಿರಣ್.ಬಿ | ಸಹಯಕ ಕಾರ್ಯಪಾಲಕ ಅಭಿಯಂತರರು, ಯೋಜನಾ ವಿಭಾಗ, ಯಲಹಂಕ ವಲಯ, ಬಿಬಿಎಂಪಿ |
| 4 | ಶ್ರೀ ವಿ. ಪ್ರೇಮ್ ಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ. 06 |
| 5 | ಶ್ರೀ ಶಶಿಧರ್ | ಕಂದಾಯ ಪರಿವೀಕ್ಷಕರು, ವಾರ್ಡ್ ನಂ. 06 |
| 6 | ಶ್ರೀ ಮಂಜುನಾಥ್. ಎಸ್ | ಕಿರಿಯ ಆರೋಗ್ಯ ಪರಿವೀಕ್ಷಕರು, |

ಶ್ರೀ ಸುರೇಶ್ ದೇವತ್‌ರಾಜ್, ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ವಾರ್ಡ್ ಅಭಿಯಂತರರು ವಾರ್ಡ್ ನಂ. 06 ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು, ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಕಮಿಟಿ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡ ವಿಷಯಗಳ ಬಗ್ಗೆ ತಿಳಿಸಿದರು.

1. **ಕೋವಿಡ್-19ರ ಸಂಬಂಧ ಮುಜಾಗೃತ ಕ್ರಮಗಳ ಬಗ್ಗೆ.** ವಾರ್ಡ್ ಸ.ಅ ರವರು ಮಾತನಾಡಿ ಡಾ॥ ಕೇಶವಪಾಣಿ ರವರು ವಾರ್ಡ್ ವ್ಯಾಪ್ತಿಯಲ್ಲಿ ವಾರಿಯರ್ಸ್‌ಗಳಿಗೆ ಲಸಿಕೆ ನೀಡುವ ಕೆಲಸದಲ್ಲಿ ತೊಡಗಿಸಿಕೊಂಡಿರುವುದರಿಂದ ಸದರಿ ಸಭೆಗೆ ಗೈರುಹಾಜರಾಗಿರುತ್ತಾರೆಂದು ಸಭೆಗೆ ತಿಳಿಸಿದರು.
2. **ದಾಸಪ್ಪ, ಸಂಯುಕ್ತ ಗೆಳೆಯರ ಬಳಗ ಹೆಗಡೆನಗರ:** ರವರು ಮಾತನಾಡಿ
    1. ಹೆಗಡೆನಗರ ಮುಖ್ಯರಸ್ತೆ, ಬೇಕರಿ ಪಕ್ಕದ ಚರಂಡಿಯ ಸ್ಲಾಭ್‌ಗಳು ಹಾಳಾಗಿದ್ದು, ಬದಲಾಯಿಸಲು ಕೋರಿದರು.
    2. ಹೆಗಡೆನಗರ ಪೂರ್ವ ಭಾಗದಲ್ಲಿ 1 ರಿಂದ 9 ಅಡ್ಡರಸ್ತೆಗಳನ್ನು ಅಭಿವೃದ್ದಿಪಡಿಸಲು ಕೋರಿದರು.
    3. ಬಿಬಿಎಂಪಿ ರೆವಿನ್ಯೂ ವಿಭಾಗದ ಎ.ಆರ್.ಓ ರವರು 2000ಕ್ಕಿಂತ ಮುಂಚಿತವಿರುವ ಸ್ವತ್ತುಗಳಿಗೆ 94ಸಿ ಅಡಿಯಲ್ಲಿ ಖಾತಾ ಬದಲಾವಣೆಗೆ ಬರುವ ಅರ್ಜಿಗಳು ಪರಿಶೀಲಿಸಲು ಕೋರಿದರು.

4. ಮನೆ ಮನೆಗಳಿಂದ ಬೇರ್ಪಡಿಸಿದ ಹಸಿ ಕಸ ಒಣಕಸವನ್ನು ಒಂದೇ ವಾಹನದಲ್ಲಿ ವಿಲೇವಾರಿ ಮಾಡುತ್ತಿರುವುದಾಗಿ ತಿಳಿಸಿದರು ಈ ಬಗ್ಗೆ ಕ್ರಮ ವಹಿಸಲು ಕೋರಿದರು.
5. ಹೆಗಡೆನಗರದಲ್ಲಿ ಸಾರ್ವಜನಿಕ ಶೌಚಾಲಯವನ್ನು ನಿರ್ಮಿಸಲು ಕೋರಿದರು ಇದಕ್ಕೆ ನೊಡೆಲ್ ಅಧಿಕಾರಿಗಳು ಹಾಗೂ ಸ.ಕಾ.ಅ ಬ್ಯಾ.ಉ.ವಿ ರವರು ಮಾತನಾಡಿ ಹೆಗಡೆನಗರದಲ್ಲಿ ಶೌಚಾಲಯ ನಿರ್ಮಿಸಲು ಸೂಕ್ತ ಸ್ಥಳ ಇಲ್ಲದೇ ಇರುವುದರಿಂದ ಶೌಚಾಲಯ ನಿರ್ಮಿಸಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿದರು.
6. ಹೆಗಡೆನಗರ ವೃತ್ತದಲ್ಲಿ ಟ್ರಾಫೀಕ್ ಸಮಸ್ಯೆ ಬಗ್ಗೆ ವಿವರಿಸಿದರು.

3. **ಮಹಾದೇವ್, ಅಮರಜ್ಯೋತಿ ಬಡಾವಣೆಯಲ್ಲಿ** ಕಸ ವಿಲೇವಾರಿ ಸಮರ್ಪಕವಾಗಿ ನಡೆಯುತ್ತಿರುವುದಿಲ್ಲ ಇದರಿಂದ ಸಮಸ್ಯೆ ಹೆಚ್ಚಾಗಿರುವುದಾಗಿ ಸಭೆಗೆ ತಿಳಿಸಿದರು.

4. **ಶ್ರೀನಿವಾಸ್‌ರಾವ್** ಅಮರಜ್ಯೋತಿ ಬಡಾವಣೆ ರವರು ಮಾತನಾಡಿ

1. ಥಣಿಸಂದ್ರ ಮುಖ್ಯರಸ್ತೆಯಲ್ಲಿ ಹಾಲಿ ನಡೆಯುತ್ತಿರುವ White Taping ರಸ್ತೆಯನ್ನು ಬಿಬಿಎಂಪಿಯ ವತಿಯಿಂದ ಉತ್ತಮ ರೀತಿಯಲ್ಲಿ ನಿರ್ಮಿಸುತ್ತಿದ್ದು, ಇದರಿಂದ ಪಾಲಿಕೆಗೆ ಸಾರ್ವಜನಿಕರಿಂದ ಅಭಿನಂದನೆಗಳನ್ನು ಸಲ್ಲಿಸಿ ಹರ್ಷ ವ್ಯಕ್ತಪಡಿಸಿದರು.
2. ಬಿ.ಡಬ್ಲೂ.ಎಸ್.ಎಸ್.ಬಿ ಇಲಾಖೆ ರವರು ಒಳಚರಂಡಿ ಹಾಗೂ ಎಸ್.ಟಿ.ಪಿ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕೋರಿದರು.
3. ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರಿಗಾಗಿ ಪಾರ್ಕ್‌ಗಳು, ಆಟದ ಮೈದಾನಗಳು, ಹಾಗೂ ಗ್ರಂಥಾಲಯವನ್ನು ನಿರ್ಮಾಣ ಮಾಡಲು ಕೋರಿದರು.
4. ನಾರಾಯಣಪುರ ಕ್ರಾಸ್ ಹತ್ತಿರ ನಿರ್ಮಿಸಿರುವ ಮೇಲುಸೇತುವೆ ಕೆಳಭಾಗದಲ್ಲಿ ಗಿಡಗಳನ್ನು ನೆಟ್ಟು ಸುಂದರೀಕರಿಸಲು ಕೋರಿದರು.
5. ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರ ಸೇರಿದಂತೆ ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಿಯಾದ ಅಧಿಕಾರಿಗಳ ಮೇಲೆ ಕ್ರಮ ವಹಿಸಲು ಕೋರಿದರು ಇದಕ್ಕೆ ನೋಡೆಲ್ ಅಧಿಕಾರಿಯವರು ಮಾತನಾಡಿ ಜಂಟಿ ಆಯುಕ್ತರು, ಯಲಹಂಕ ವಲಯ ರವರ ಗಮನಕ್ಕೆ ಲಿಖಿತ ಮೂಲಕ ತಿಳಿಸಲಾಗುವುದೆಂದು ಹಾಗೂ ನೋಟಿಸ್‌ಗಳನ್ನು ನೀಡಲು ಕೋರಲಾಗುವುದೆಂದು ತಿಳಿಸಿದರು.

5. ವಾರ್ಡ್ ನಂ. 06ರ ಅಭಿಯಂತರರು ಸುರೇಶ್ ಸ.ಅ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಯಲ್ಲಿರುವ ಕಾಮಗಾರಿಗಳ ವಿವರಗಳನ್ನು ಸಭೆಗೆ ಈ ಕೆಳಕಂಡಂತೆ ವಿವರಿಸಿದರು.

1. ರೈಲ್ವೆಮೆನ್ಸ್ ಬಡಾವಣೆ ಮುಖ್ಯರಸ್ತೆ ಹಾಗೂ ಅಡ್ಡರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ
2. ರಾಚೇನಹಳ್ಳಿಯ ಭಾಗ್ಯಶ್ರೀ ಬಡಾವಣೆ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ
3. ವಾಜೀದ್ ಬಡಾವಣೆ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ
4. ಅಮರಜ್ಯೋತಿ ಬಡಾವಣೆ 2ನೇ ಹಂತದಲ್ಲಿ ಕಾಂಕ್ರೀಟ್ ರಸ್ತೆಗಳ ನಿರ್ಮಾಣ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿ
5. ದಾಸರಹಳ್ಳಿ ಎಕ್ಸ್‌ಟೆನ್ಷನ್ ಬಡಾವಣೆಯ ರಸ್ತೆಗಳ ಅಭಿವೃದ್ಧಿ

6. ಭುವನೇಶ್ವರಿನಗರ 3ನೇ, 4ನೇ ಮತ್ತು 5ನೇ ಅಡ್ಡರಸ್ತೆಗಳ ಅಭಿವೃದ್ಧಿ
7. ಸಾರಾಯಿಪಾಳ್ಯ ಸರ್ಕಾರಿ ಶಾಲೆ ಹಿಂಭಾಗದ ರಸ್ತೆಗಳ ಹಾಗೂ ರಸೂಲ್ ಬಡಾವಣೆ ರಸ್ತೆಗಳ ಅಭಿವೃದ್ಧಿ
8. ಮಾರುತಿ ಸಾಮಿಲ್ ರಸ್ತೆ ಹಾಗೂ ಅಡ್ಡರಸ್ತೆಗಳ ಅಭಿವೃದ್ಧಿ
9. ಸಾದಿಕ್ ಬಡಾವಣೆ ರಸ್ತೆ ಹಾಗೂ ಅಡ್ಡರಸ್ತೆಗಳ ಅಭಿವೃದ್ಧಿ
10. ಬಲೂನ್ ಪ್ಯಾಕ್ಟರಿ ರಸ್ತೆ ಹಾಗೂ ಅಬುಬುಕ್ಕರ್ ಮಸೀದಿ ಭರತ್‌ನಗರದ ರಸ್ತೆ ಅಭಿವೃದ್ಧಿ ಹಾಗೂ ಚರಂಡಿ ನಿರ್ಮಾಣ
11. ಅಲಿ ಮಸೀದ್ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ
12. ಸೆಂಟ್ರಲ್ ಎಕ್ಸೈಜ್ ಬಡಾವಣೆ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ
13. ಟೆಲಿಕಾಂ ಬಡಾವಣೆ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ
14. ಎಸ್.ವಿ.ಎನ್ ಶಾಲೆ ರಸ್ತೆಗಳ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ
15. ರಾಚೇನಹಳ್ಳಿ ಕಾಲೋನಿ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ

**ಪೂರ್ಣಗೊಂಡ ಕಾಮಗಾರಿಗಳ ವಿವರಗಳು :**

1. ಸಾರಾಯಿಪಾಳ್ಯ ಕಾಲೋನಿ ರಸ್ತೆಗಳ ಅಭಿವೃದ್ಧಿ
2. ಮರಿಯಣ್ಣಪಾಳ್ಯ ಕಾಲೋನಿ ರಸ್ತೆಗಳ ಅಭಿವೃದ್ಧಿ
3. ರಾಚೇನಹಳ್ಳಿ ಮೇಸ್ತ್ರೀಪಾಳ್ಯ ರಸ್ತೆ ಅಭಿವೃದ್ಧಿ ಹಾಗೂ ಡಾಂಬರೀಕರಣ

**ಹೆಗಡೆನಗರ ಪೂರ್ವ ಮತ್ತು ಪಶ್ಚಿಮ ಭಾಗದಲ್ಲಿ** ಯಲಹಂಕ ವಲಯ ಯೋಜನಾ ವೀಭಾಗದ ವತಿಯಿಂದ ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ.

ಕೊನೆಯದಾಗಿ ಮಾನ್ಯ ನೋಡೆಲ್ ಅಧಿಕಾರಿಗಳು, ವಾರ್ಡ್ ಸಮಿತಿ ರವರು ಮಾತನಾಡಿ ಈವರೆವಿಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರಿಗಣಿಸಿ ಎಲ್ಲಾ ದೂರು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆ ತರಲು ಕಾರ್ಯೋನ್ಮುಖರಾಗುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ಇಲಾಖಾ ಅಧಿಕಾರಿಗಳಿಗೆ ಸೂಚಿಸುತ್ತಾ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

24/02/2021
ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್‌ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)

24/2/2021
ನೋಡಲ್ ಅಧಿಕಾರಿಗಳು
ವಾರ್ಡ್ ಸಮಿತಿ, ವಾರ್ಡ್ ನಂ. 06, (ಥಣಿಸಂದ್ರ)

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿಆಯುಕ್ತರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಿಸಿದೆ
6. ಕಛೇರಿ ಕಡತಕ್ಕೆ.